ಕೆರೆ ಬದಿಯ ತಂಪು ಬಿಲ
ಪೊದೆಭರಿತ ಹಸಿರು ಹೊಲ
ಇನ್ನು ಕನಸು.
ಹಸಿ ಹಸಿರು ಬಂಗಾರ ಬಿದಿರು ಮೆಳೆ
ಆ ನನ್ನ ಮಹಡಿ ಮನೆ ಮರ ಪೊಟರೆ
ಮುಗಿದ ಅಧ್ಯಾಯ.

ನಾ ಸರಿವ ಹಾದಿಬೀದಿಯಲ್ಲೆಲ್ಲ ಮನೆಯ
ಕಟ್ಟಿದಿರಿ
ಕುಡಿವ ನೀರಿನ ಕೆರೆಯ ಉಸಿರುಗಟ್ಟಿಸಿದಿರಿ
ಎಲ್ಲಿ ಹೋಗಲಿ ಹೇಳಿ ನೀವು ಇಂದು
ಬರಿದೆ ಹೌಹಾರದಿರಿ ಹಾವು ಹಾವೆಂದು.

ಯಾರ ಬಳಿ ಹೇಳಿಕೊಳ್ಳಲಿ
ಯಾವಾತನಿಗೂ ಈವರೆಗೆ ಕಚ್ಚಿಲ್ಲವೆಂದು
ಯಾವ ದಾಖಲೆ ತಂದಿಡಲಿ
ನಿಮ್ಮೆದಿರು ಇಂದು.

